ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 192 (209) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 10.12.2024 |
| ಉತ್ತರಿಸುವ ಸಚಿವರು | : | ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು. |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಲ್ಯಾಣ ಕರ್ನಾಟಕ ಭಾಗದಲ್ಲಿ ಕಳೆದ 2 ವರ್ಷಗಳಲ್ಲಿ ಕೈಗಾರಿಕೆಗಳ ಸ್ಥಾಪನೆಗಳ ಉದ್ದೇಶಕ್ಕಾಗಿ ಕೆಐಎಡಿಬಿ ಯು ಎಷ್ಟು ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಂಡಿದೆ; (ವಿವರ ನೀಡುವುದು)</td><td>
<table>
<tr><th rowspan="2">ಕ್ರ. ಸಂ</th><th rowspan="2">ಜಿಲ್ಲೆ/ ತಾಲ್ಲೂಕು ಗ್ರಾಮ</th><th rowspan="2">ಕಲಂ 28(4) ರ ಅಧಿಸೂಚನೆ ಸಂಖ್ಯೆ</th><th>ವಿಸ್ತೀರ್ಣ</th><th>ಏಕ ಘಟಕ ಸಂಕೀರ್ಣ ವಿಸ್ತೀರ್ಣ</th></tr>
<tr><th colspan="2">ಎ-ಗು</th></tr>
<tr><td colspan="5">ಕೈಗಾರಿಕಾ ಪ್ರದೇಶ</td></tr>
<tr><td>1.</td><td>ಕಲಬುರ್ಗಿ ಜಿಲ್ಲೆ ಮತ್ತು ತಾಲ್ಲೂಕು. ನಂದೂರು (ಕೆ)</td><td>ಅಧಿಸೂಚನೆ ಸಂಖ್ಯೆ:ಸಿಐ 975 ಎಸ್.ಪಿ.ಕ್ಯೂ(ಇ) 2019 ದಿನಾಂಕ: 25-11-2022ರ ಆದೇಶದಂತೆ</td><td>595-09</td><td>--</td></tr>
<tr><td colspan="5">ಏಕ ಘಟಕ ಸಂಕೀರ್ಣ</td></tr>
<tr><td>2.</td><td>ಮ|| ರಿಸೋರ್ಸಸ್ ಪೆಲ್ಲೆಟ್ಸ್ ಕಾನ್ಸಂಟ್ರೇಟ್ ಪ್ರೈ ಲಿ, ಇವರ ಯೋಜನೆಗಾಗಿ ಬಳ್ಳಾರಿ ಜಿಲ್ಲೆ ಸಂಡೂರು ತಾಲ್ಲೂಕು ಸೋಮಲಪುರ</td><td>ಅಧಿಸೂಚನೆ ಸಂಖ್ಯೆ: ಸಿಐ 37 ಎಸ್.ಪಿ.ಕ್ಯೂ 2022 ದಿನಾಂಕ: 11-07-2024ರ ಆದೇಶದಂತೆ</td><td>--</td><td>184-19</td></tr>
<tr><td>3.</td><td>ಮ|| ರಿಸೋರ್ಸಸ್ ಪೆಲ್ಲೆಟ್ಸ್ ಕಾನ್ಸಂಟ್ರೇಟ್ ಪ್ರೈ ಲಿ, ಇವರ ಯೋಜನೆಗಾಗಿ ವಿಜಯನಗರ ಜಿಲ್ಲೆ ಹೊಸಪೇಟೆ ತಾಲ್ಲೂಕಿನ ಅಯ್ಯನಹಳ್ಳಿ,ಗರಗ, ನಾಗಲಾಪುರ, ಮತ್ತು ಹಗರಿಬೊಮ್ಮನಹಳ್ಳಿ ತಾಲ್ಲೂಕು. ವರದಾಪುರ ನಾರಾಯಣದೇವನ ಕೆರೆ</td><td>ಅಧಿಸೂಚನೆ ಸಂಖ್ಯೆ:ಸಿಐ 122 ಎಸ್.ಪಿ.ಕ್ಯೂ 2023 ದಿನಾಂಕ: 01-06-2024ರ ಆದೇಶದಂತೆ</td><td>- -</td><td>251-04</td></tr>
<tr><td></td><td></td><td>ಒಟ್ಟು</td><td>595-09</td><td>435-23</td></tr>
</table>
</td></tr>
</table>

| | | |
|---|---|---|
| ಆ) | ಕೆಐಎಡಿಬಿ ವತಿಯಿಂದ ಖಾಸಗಿ ಸಂಸ್ಥೆಗೆ ಮತ್ತು ಉದ್ಯಮಗಳಿಗೆ ಜಮೀನುಗಳನ್ನು ಹಂಚಿಕೆ ಮಾಡುವಾಗ ಅನುಸರಿಸುತ್ತಿರುವ ಮಾನದಂಡಗಳೇನು; | ಮಂಡಳಿಯ ಕೈಗಾರಿಕಾ ಪ್ರದೇಶಗಳಲ್ಲಿ ನಿವೇಶನ ಹಂಚಿಕೆಗೆ ಇರುವ ಮಾನದಂಡಗಳನ್ನು **ಅನುಬಂಧ-1** ರಲ್ಲಿ ಒದಗಿಸಲಾಗಿದೆ. |
| ಇ) | ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ಕೆಐಎಡಿಬಿಯು ಹಣ ಪಾವತಿಸಿಕೊಂಡು ಎಷ್ಟು ಖಾಸಗಿ ಸಂಸ್ಥೆಗಳಿಗೆ ಜಮೀನು ಹಂಚಿಕೆ ಮಾಡಲಾಗಿದೆ; (ವಿವರ ನೀಡುವುದು) | ಮಂಡಳಿಯು ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ಅಭಿವೃದ್ಧಿಪಡಿಸಿರುವ ಕೈಗಾರಿಕಾ ಪ್ರದೇಶಗಳಲ್ಲಿ ಜಮೀನು ಹಂಚಿಕೆ ಮಾಡಿರುವ ಜಿಲ್ಲಾವಾರು ವಿವರಗಳನ್ನು **ಅನುಬಂಧ-2** ರಲ್ಲಿ ಒದಗಿಸಲಾಗಿದೆ. |
| ಈ) | ಕಳೆದ 2 ವರ್ಷಗಳಲ್ಲಿ ಕೆಐಎಡಿಬಿಯು ಎಷ್ಟು ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಂಡಿದೆ ಹಾಗೂ ಭೂಮಿಯನ್ನು ಕಳೆದುಕೊಂಡ ರೈತರಿಗೆ ಯಾವ ರೀತಿಯ ಪರಿಹಾರ ನೀಡಲಾಗಿದೆ? (ವಿವರ ನೀಡುವುದು) | ಭೂಸ್ವಾಧೀನಪಡಿಸಿಕೊಂಡ ಜಮೀನುಗಳ ವಿವರವನ್ನು (ಅ) ರಲ್ಲಿ ನೀಡಿದೆ.<br><br>ಭೂಸ್ವಾಧೀನಪಡಿಸಿಕೊಂಡ ಜಮೀನುಗಳ ಭೂಮಾಲೀಕರಿಗೆ ಕೆಐಎಡಿ ಕಾಯ್ದೆ 1966 ರ ಕಲಂ 29(2) ರಡಿ ಜರುಗುವ ಭೂನಿರ್ಧರಣಾ ಸಲಹಾ ಸಮಿತಿ ಸಭೆಯಲ್ಲಿ ಮಾಡಿದ ಶಿಫಾರಸ್ಸಿನ ದರವನ್ನು ಮಂಡಳಿಯ ಸಭೆಯಲ್ಲಿ ಮಂಡಿಸಿ ಅದರ ಅನುಗುಣವಾಗಿ ನಿಯಮಾನುಸಾರ ಜಮೀನಿನ ಭೂಮಾಲೀಕರಿಗೆ ಭೂಪರಿಹಾರ ಪಾವತಿಸಲಾಗುತ್ತದೆ. |

**ಸಂಖ್ಯೆ:ಸಿಐ 497 ಐಎಪಿ 2024**

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು

# ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಬೆಂಗಳೂರು

**ಅನುಬಂಧ-1**

## ಕೈಗಾರಿಕಾ ನಿವೇಶನಗಳ ಹಂಚಿಕೆಯ ನಿಯಮಾವಳಿಗಳು

ಕೈಗಾರಿಕಾ ಉದ್ದೇಶಿತ ಯೋಜನೆಗಳಿಗೆ ಸರ್ಕಾರವು ಭೂಮಿಯನ್ನು ಕೆಐಎಡಿಬಿ ಮೂಲಕ ಕೈಗಾರಿಕೆಗಳಿಗೆ ಹಂಚಿಕೆ ಮಾಡಲು ಈ ಕೆಳಕಂಡ ಸಕ್ಷಮ ಪ್ರಾಧಿಕಾರಗಳಿಂದ ಅನುಮೋದನೆ ಪಡೆದ ನಂತರ, ನಿಗದಿತ ಅರ್ಜಿ ನಮೂನೆಯೊಂದಿಗೆ ಮಂಡಳಿಯ ಕೇಂದ್ರ ಕಛೇರಿಗಳಿಗೆ/ ವಲಯ ಕಛೇರಿಗಳಿಗೆ ನಿವೇಶನ ಹಂಚಿಕೆಗಾಗಿ ಅರ್ಜಿಗಳನ್ನು ಸಲ್ಲಿಸಬೇಕಾಗುವುದು.

| | |
|---|---|
| ಕರ್ನಾಟಕ ಸರ್ಕಾರದ ಸನ್ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿನ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡುವ ಸಮಿತಿ. | ರೂ. 500 ಕೋಟಿಗಳಿಗೂ ಮೀರಿದ ಬಂಡವಾಳ ಹೂಡಿಕೆಯ ಯೋಜನೆಗಳನ್ನು ಪರಿಶೀಲಿಸಿ, ಅನುಮೋದನೆ ನೀಡಲಾಗುವುದು. |
| ಕರ್ನಾಟಕ ಸರ್ಕಾರದ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಮಂತ್ರಿಗಳ ಅಧ್ಯಕ್ಷತೆಯಲ್ಲಿನ ರಾಜ್ಯ ಮಟ್ಟದ ಏಕ ಗವಾಕ್ಷಿ ಒಪ್ಪಿಗೆ ನೀಡುವ ಸಮಿತಿ. | ರಾಜ್ಯದಲ್ಲಿ ರೂ. 15 ಕೋಟಿಗಳಿಗಿಂತ ಹೆಚ್ಚಿನ ಮತ್ತು ರೂ. 500 ಕೋಟಿಗಳ ಒಳಗಿನ ಬಂಡವಾಳ ಹೂಡಿಕೆಯ ಕೈಗಾರಿಕಾ ಯೋಜನೆಗಳನ್ನು ಪರಿಶೀಲಿಸಿ, ಅನುಮೋದನೆ ನೀಡಲಾಗುವುದು. |
| ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿನ ಜಿಲ್ಲಾ ಮಟ್ಟದ ಏಕ ಗವಾಕ್ಷಿ ಸಮಿತಿ. | ರೂ.15 ಕೋಟಿಗಳವರೆಗೆ ಬಂಡವಾಳ ಹೂಡುವ ಸಣ್ಣ ಕೈಗಾರಿಕಾ ಘಟಕಗಳ ಅರ್ಜಿಗಳನ್ನು ಪರಿಶೀಲಿಸಿ, ಅನುಮೋದನೆ ನೀಡಲಾಗುವುದು. |

ನಿವೇಶನ ಕೋರಿ ನಿಗದಿತ ಅರ್ಜಿಗಳ ಜೊತೆಯಲ್ಲಿ ಈ ಕೆಳಕಂಡ ದಾಖಲೆಗಳೊಂದಿಗೆ ಕೆ.ಐ.ಎ.ಡಿ.ಬಿ. ಕಛೇರಿಗೆ ಅಥವಾ ಜಿಲ್ಲಾ ಕೈಗಾರಿಕಾ ಕೇಂದ್ರ ಕಛೇರಿಗೆ ಸಲ್ಲಿಸುವುದು. ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಹಾಗೂ ರಾಮನಗರ ಜಿಲ್ಲೆಗಳಲ್ಲಿನ ಕೈಗಾರಿಕಾ ಪ್ರದೇಶಗಳಿಗೆ ನಿವೇಶನ ಕೋರುವ ಅರ್ಜಿಗಳನ್ನು ಕೆ.ಐ.ಎ.ಡಿ.ಬಿ ಕೇಂದ್ರ ಕಛೇರಿ/ಕರ್ನಾಟಕ ಉದ್ಯೋಗ ಮಿತ್ರ, ಬೆಂಗಳೂರು ಇಲ್ಲಿಗೆ ಸಲ್ಲಿಸುವುದು.

- ವಿವರವಾದ ಯೋಜನಾ ವರದಿ ದ್ವಿಪ್ರತಿಯಲ್ಲಿ
- ಸಂಘದ ವಿವರಣಾ ಪತ್ರ ಮತ್ತು ನಿಯಮಾವಳಿಗಳು/ಪಾಲುಗಾರಿಕೆ ಕರಾರು ಪತ್ರ/ ಮೆಮೊರೆಂಡಮ್ ಅಂಡ್ ಆರ್ಟಿಕಲ್ಸ್ ಆಫ್ ಅಸೋಷಿಯೇಷನ್ ಅನ್ವಯಿಸುವಂತೆ ದ್ವಿಪ್ರತಿಯಲ್ಲಿ.
- ಉದ್ಯೋಗ ಆಧಾರ್ ನೋಂದಣಿ ಪ್ರಮಾಣ ಪತ್ರ.
- ಭೂಮಿಯ ಉದ್ದೇಶಿತ ಉಪಯೋಗವನ್ನು ಸೂಚಿಸುವ ನಕ್ಷೆ.
- ಮುಂಗಡ ಠೇವಣಿಯಾಗಿ ಎಕರೆಯೊಂದಕ್ಕೆ ರೂ. 5000/-ಗಳು.
- ರಾಜ್ಯ ಉನ್ನತ ಮಟ್ಟದ ಅನುಮೋದನಾ ಸಮಿತಿ / ರಾಜ್ಯ ಮಟ್ಟದ ಏಕ ಗವಾಕ್ಷಿ ಸಮಿತಿ / ಜಿಲ್ಲಾ ಮಟ್ಟದ ಏಕ ಗವಾಕ್ಷಿ ಸಮಿತಿ ಅನುಮೋದನಾ ಪತ್ರ.

**ಕೈಗಾರಿಕಾ ನಿವೇಶನಗಳ ಹಣ ಪಾವತಿಸುವ ನಿಯಮಗಳು**

| | |
|---|---|
| ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ಕೋಲಾರ, ತುಮಕೂರು, ಮೈಸೂರು, ಹಾಸನ, ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಕೈಗಾರಿಕಾ ಪ್ರದೇಶಗಳ ನಿವೇಶನ ಬೆಲೆಯನ್ನು ಪಾವತಿಸುವ ವಿಧಾನ (ಸಾಮಾನ್ಯ ವರ್ಗದ ಉದ್ದಿಮೆದಾರರಿಗೆ) | ಅ. ಅರ್ಜಿಯ ಜೊತೆ ನಿವೇಶನ ಹಂಚಿಕೆಯ ಬೆಲೆಯ ಶೇ 30 ರಷ್ಟು ಹಣವನ್ನು ಮುಂಗಡವಾಗಿ ಪಾವತಿಸುವುದು.<br>ಆ. ನಿವೇಶನ ಹಂಚಿಕೆಯಾದ ದಿನದಿಂದ 90 ದಿನಗಳ ಒಳಗಾಗಿ ನಿವೇಶನದ ಬಾಕಿ 70% ಬೆಲೆಯನ್ನು ಪಾವತಿಸುವುದು. |
| ರಾಜ್ಯದ ಉಳಿದ ಜಿಲ್ಲೆಗಳಲ್ಲಿ ಕೈಗಾರಿಕಾ ಪ್ರದೇಶಗಳ ನಿವೇಶನ ಬೆಲೆಯನ್ನು ಪಾವತಿಸುವ ವಿಧಾನ. (ಸಾಮಾನ್ಯ ವರ್ಗದ ಉದ್ದಿಮೆದಾರರಿಗೆ) | ಅ ಅರ್ಜಿಯ ಜೊತೆ ನಿವೇಶನ ಹಂಚಿಕೆಯ ಬೆಲೆಯ ಶೇ 20 ರಷ್ಟು ಹಣವನ್ನು ಮುಂಗಡವಾಗಿ ಪಾವತಿಸುವುದು.<br>ಆ ನಿವೇಶನ ಹಂಚಿಕೆಯಾದ ದಿನದಿಂದ 90 ದಿನಗಳ ಒಳಗಾಗಿ ನಿವೇಶನದ ಬಾಕಿ 80% ಬೆಲೆಯನ್ನು ಪಾವತಿಸುವುದು. |

| | |
|---|---|
| ಮಹಿಳಾ ಉದ್ದಿಮೆದಾರರು ನಿವೇಶನದ ಬೆಲೆಯನ್ನು ಪಾವತಿಸುವ ವಿಧಾನ. | ಅ. ಅರ್ಜಿಯ ಜೊತೆ ನಿವೇಶನ ಹಂಚಿಕೆಯ ಬೆಲೆಯ ಶೇ. 10 ರಷ್ಟು ಮೊತ್ತವನ್ನು ಮುಂಗಡ ಠೇವಣಿಯಾಗಿ ಅರ್ಜಿಯ ಜೊತೆ ಪಾವತಿಸುವುದು.<br>ಆ. ನಿವೇಶನ ಹಂಚಿಕೆಯಾದ ದಿನದಿಂದ 180 ದಿನಗಳ ಒಳಗಾಗಿ ನಿವೇಶನದ ಬಾಕಿ 90% ಬೆಲೆಯನ್ನು ಪಾವತಿಸುವುದು. |
| ಹಿಂದುಳಿದ ವರ್ಗದವರು, ಅಲ್ಪಸಂಖ್ಯಾತರು, ಅಂಗವಿಕಲ ಉದ್ದಿಮೆದಾರರು ಮತ್ತು ಮಾಜಿ ಸೈನಿಕರು ನಿವೇಶನದ ಬೆಲೆಯನ್ನು ಪಾವತಿಸುವ ವಿಧಾನ. | ಇ. ಅರ್ಜಿಯ ಜೊತೆ ನಿವೇಶನ ಹಂಚಿಕೆಯ ಬೆಲೆಯ ಶೇ. 20/30 ರಷ್ಟು ಮೊತ್ತವನ್ನು ಮುಂಗಡ ಠೇವಣಿಯಾಗಿ ಅರ್ಜಿಯ ಜೊತೆ ಪಾವತಿಸುವುದು.<br>ಈ. ನಿವೇಶನ ಹಂಚಿಕೆಯಾದ ದಿನದಿಂದ 6 ಸಮ ತ್ರೈಮಾಸಿಕ ಕಂತುಗಳಲ್ಲಿ ನಿವೇಶನದ ಬಾಕಿ ಶೇ.80/70 ಬೆಲೆಯನ್ನು ಪಾವತಿಸುವುದು. |
| ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ದಿಮೆದಾರರು | ಉ. ಮಂಡಳಿಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಹಂಚಿಕೆ ಮಾಡಲಾಗುವ ಜಮೀನಿನ ಹಂಚಿಕೆ ದರದಲ್ಲಿ ಶೇ.75ರ ರಿಯಾಯಿತಿಯನ್ನು ನೀಡಲಾಗುವುದು ಮತ್ತು ಈ ಮೊತ್ತವನ್ನು ಸರ್ಕಾರದಿಂದ SCP/TSP ಯೋಜನೆಯಡಿ ಬಿಡುಗಡೆಯಾಗುವ ಅನುದಾನದಲ್ಲಿ ಹೊಂದಾಣಿಕೆ ಮಾಡಿಕೊಳ್ಳಲಾಗುವುದು.<br>ಊ. ಮಂಡಳಿಯು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರಿಂದ ನಿವೇಶನ ಹಂಚಿಕೆ ದರದ ಮೇಲೆ ಶೇ.10ರ ಹಣವನ್ನು ಅರ್ಜಿಯ ಜೊತೆಗೆ ಪ್ರಾರಂಭಿಕ ಠೇವಣಿಯನ್ನಾಗಿ ಪಾವತಿಸಿಕೊಂಡು ಹಂಚಿಕೆ ಪತ್ರ ನೀಡುವುದು ಮತ್ತು ಸ್ವಾಧೀನ ಪತ್ರ ನೀಡಿ ಗುತ್ತಿಗ ಮತ್ತು ಮಾರಾಟ ಕರಾರು ಪತ್ರವನ್ನು ನೆರವೇರಿಸಲಾಗುವುದು.<br>ಋ. ನಿವೇಶನ ಹಂಚಿಕೆ ದರದ ಬಾಕಿ ಶೇ. 15 ರ ಹಣವನ್ನು 8 ಸಮ ತ್ರೈಮಾಸಿಕ ಕಂತುಗಳಲ್ಲಿ ಶೇ.10 ರಷ್ಟು ಬಡ್ಡಿಯೊಂದಿಗೆ ಸ್ವಾಧೀನಪತ್ರ ನೀಡಿದ ದಿನಾಂಕದಿಂದ ವಸೂಲಾತಿ ಮಾಡಿಕೊಳ್ಳುವುದು ಮತ್ತು ಸದರಿ ಮೊತ್ತವನ್ನು ನಿಗದಿತ ಅವಧಿಯಲ್ಲಿ |

| | |
|---|---|
| | ಪಾವತಿಸುವ ಕುರಿತು ಉದ್ದಿಮೆದಾರರಿಂದ ಸೂಕ್ತ ಮುಚ್ಚಳಿಕೆ ಪತ್ರ ಪಡೆದುಕೊಳ್ಳಲಾಗುವುದು. |

ಸಾಮಾನ್ಯ ವರ್ಗದ ಉದ್ದಿಮೆದಾರರಿಗೆ ಹಂಚಿಕೆಯಾದ ನಿವೇಶನದ ಪೂರ್ಣ ಮೊತ್ತವನ್ನು ಪಾವತಿಸಿದ ನಂತರ ಹಂಚಿಕೆಯ ದೃಢೀಕರಣದ ಪತ್ರವನ್ನು ನೀಡಿ ನಿವೇಶನದ ಸ್ವಾಧೀನ ಪತ್ರ ನೀಡಲಾಗುವುದು. ನಂತರ ಗುತ್ತಿಗೆ ಕರಾರು ಪತ್ರವನ್ನು ನೆರವೇರಿಸಲಾಗುವುದು. (10 ವರ್ಷ ಗುತ್ತಿಗೆ ಅವಧಿಗೆ ಗುತ್ತಿಗೆ ಮತ್ತು ಮಾರಾಟ ಕರಾರು ಪತ್ರ ನೆರವೇರಿಸಲಾಗುವುದು).

**ANNEXURE- 2**

## KARNATAKA INDUSTRIAL AREAS DEVELOPMENT BOARD

### DETAILS OF LAND ALLOTTED IN DISTRICTS OF KALYANA KARNATAKA REGION

| Sl. No. | Name of the District | No. of Indl. Areas | Allotted | |
|---|---|---|---|---|
| | | | No. of units | Extent (Acres) |
| 1 | Bellari | 9 | 358 | 331.63 |
| 2 | Bidar | 8 | 1672 | 1436.72 |
| 3 | Kalaburagi | 6 | 983 | 904.38 |
| 4 | Kolar | 11 | 881 | 1898.28 |
| 5 | Raichur | 6 | 439 | 2033.21 |
| 6 | Yadgir | 3 | 298 | 985.32 |
| | TOTAL | 43 | 4631 | 7589.54 |